ಎಂ.ಜಿ. ಮುರುಗದಾಸ್, ಜೆಮಿನಿ ಗಣೇಶ್, ಮತ್ತುರಾಮನ್, ಜೈಶಂಕರ್, ನಾಗೇಶ್ ಅವರಂಥ ಸೂಪರ್‌ಸ್ಟಾರ್‌ಗಳ ಜೊತೆಗೆ ತೆರೆಯ ಮೇಲೆ ಅವರ ಮಾದಕ ನಗುವಿನ, ಮರೆಯಲಾಗದ ನಟನೆಯ ಸಹಿ ಇದೆ. ಅಷ್ಟೇ ಅಲ್ಲ, ಹಿಂದಿಯಲ್ಲಿಯೂ ನಾಲ್ಕು ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ.

ಕನ್ನಡ ಚಿತ್ರರಂಗಕ್ಕೆ 'ಮಾಡರ್ನ್ ಲೇಡಿ'ಯನ್ನು ಕರೆತಂದವರಲ್ಲಿ ಜಯಂತಿ ಪ್ರಮುಖರು. 'ಮಿಸ್ ಲೀಲಾವತಿ', 'ಎಡಕಲ್ಲು ಗುಡ್ಡದ ಮೇಲೆ', 'ಜೇಡರ ಬಲೆ'ಗಳಂಥ ಸಿನಿಮಾಗಳಲ್ಲಿ ಅವರು ಹಚ್ಚಿದ ಕಿಡಿ ಇನ್ನೂ ಉರಿಯುತ್ತಲೇ ಇದೆ. ಆದರೆ ಅವರೆಂದೂ ಮೈಮಾಟದ ದರ್ಶನಕ್ಕಷ್ಟೇ ಸೀಮಿತಗೊಂಡವರಲ್ಲ, ಹಾಗೆಯೇ ಗ್ಲ್ಯಾಮರ್ ವೇಷವನ್ನು ಕಳಚಿಟ್ಟು, ಹೆಣ್ಣಿನ ಒಳತುಮುಲಗಳನ್ನು ಕಟ್ಟಿಕೊಡುವ ಸವಾಲಿನ ಪಾತ್ರಗಳಿಗೆ, ಪ್ರಯೋಗಶೀಲ ಪಾತ್ರಗಳಿಗೆ ತಮ್ಮನ್ನು ಒಡ್ಡಿಕೊಳ್ಳಲೂ ಹಿಂಜರಿದವರಲ್ಲ. ಹಾಗಾಗಿಯೇ 'ಅಭಿನಯ ಶಾರದೆ' ಎಂಬ ಬಿರುದು ಎಂದೂ ಭಾರವಾಗಿರಲಿಲ್ಲ; ಅವರ ಪ್ರತಿಭೆಯ ಕಿರೀಟಕ್ಕೆ ಭೂಷಣವಾಗಿಯೇ ಕಾಣುತ್ತಿತ್ತು.

ತೆರೆಯ ಮೇಲೆ ಮೆರೆದ ಈ ನಟಿಯ ವೈಯಕ್ತಿಕ ಬದುಕಲ್ಲಿ ಹಲವು ನೋವುಗಳಿದ್ದವು. ನಿರ್ದೇಶಕ ಪೇಕೇಟಿ ಶಿವರಾಮ್ ಅವರನ್ನು ವಿವಾಹವಾದ ಜಯಂತಿ ಅವರ ದಾಂಪತ್ಯ ಕೆಲವೇ ವರ್ಷಗಳಲ್ಲಿ ಮುರಿದುಬಿತ್ತು. ಆದರೆ ತಮ್ಮ ಬದುಕಿನ ನೋವನ್ನು ಎಂದಿಗೂ ತಮ್ಮ ಸಾರ್ವಜನಿಕ ಬದುಕಿನಲ್ಲಿ ತೋಡಿಕೊಂಡವರಲ್ಲ. ಹಾಗಾಗಿ ಅವರ ತುಂಬುನಗೆಯ ಚಿತ್ರವೇ ಅಭಿಮಾನಿಗಳ ಎದೆಯಲ್ಲಿ ಸ್ಥಿರವಾಗಿದೆ.

2018ರ ಮಾರ್ಚ್ ತಿಂಗಳಲ್ಲೊಮ್ಮೆ 'ಜಯಂತಿ ಸಾವನ್ನಪ್ಪಿದ್ದಾರೆ' ಎಂಬ ಸುಳ್ಳು ಸುದ್ದಿ ಎಲ್ಲೆಡೆ ಹರಿದಾಡಿತ್ತು. ಆದರೆ ಅವರ ಕುಟುಂಬದವರೇ ಅದಕ್ಕೆ ಸ್ಪಷ್ಟೀಕರಣ ನೀಡಿದ್ದರು. ಆದರೆ ಇದೇ ಜುಲೈ 26ರ ನಸುಕಿನಲ್ಲಿಯೇ ಬಂದ ಜಯಂತಿ ಸಾವಿನ ಸುದ್ದಿಯೂ ಸುಳ್ಳಾಗಿರಲಿ ಎಂದು ಅವರ ಅಭಿಮಾನಿಗಳ ಮನಸ್ಸು ಬಯಸುತ್ತಿತ್ತು. ಆದರೆ ಜಯಂತಿ ತಮ್ಮ ಬದುಕಿನ ಜಯದ ಹಾದಿಯನ್ನು ಮತ್ತೊಂದು ಲೋಕದಲ್ಲಿಯೂ ಮುಂದುವರಿಸುವಂತೆ ನಡೆದುಹೋಗಿದ್ದಾರೆ. ನಟನೆಯ ದಾರಿಯಲ್ಲಿ ಅವರು ಇಟ್ಟ ಒಂದೊಂದು ಹೆಜ್ಜೆಯೂ ಪರಿಮಳದ ಹೂವುಗಳಾಗಿ ನಳನಳಿಸುತ್ತಿವೆ.

ಚಿತ್ರ: ಆನಂದ ಬಕ್ಷಿ



## ಡಾರ್ಲಿಂಗ್ ಕೃಷ್ಣನ ಜಿಮೇಲಾಯಣ!

ಶ್ರೀ ಕೃ ಷ್ಣ@ ಜಿ ಮೇ ಲ್ . ಕಾ ಮ್ ಎಂಬ ವಿಚಿತ್ರ ಹೆಸರಿನ ಚಿತ್ರ ಸೆಟ್ಟೇರಿರುವುದೂ, ಅದರಲ್ಲಿ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸುತ್ತಿರುವುದೂ, ನಾಗಶೇಖರ್ ಆ್ಯಕ್ಷನ್ ಕಟ್ ಹೇಳುತ್ತಿರುವುದೂ ತಿಳಿದೇ ಇದೆ. ಕೊರೊನಾ ಕಣ್ಣಾಮುಚ್ಚಾಲೆಯ ನಡುವೆಯೇ ಆ ಚಿತ್ರದ ಚಿತ್ರೀಕರಣ ಮುಗಿದಿದೆ. ಮೈಸೂರಿನ ಸಂದೇಶ್ ಹೋಟೆಲ್‌ನಲ್ಲಿ ಚಿತ್ರೀಕರಣ ಮುಗಿಸಿ ಕುಂಬಳಕಾಯಿ ಒಡೆಯಲಾಗಿದೆ.

ಈ ಚಿತ್ರದ ಕಥೆಯನ್ನು ಕೇಳುವುದಕ್ಕೂ ಮುನ್ನವೇ ಕೃಷ್ಣ ನಟಿಸಲು ಒಪ್ಪಿದ್ದರಂತೆ. ಇದಕ್ಕೆ ಕಾರಣ ಕೃಷ್ಣ ಅವರಿಗೆ ನಾಗಶೇಖರ್ ಅವರ ಸೂಕ್ಷ್ಮ ಸಂವೇದನೆಯ ಮೇಲೆ ಇದ್ದ ನಂಬಿಕೆ. ಕಥೆ ಕೇಳಿದ ನಂತರವೂ ಅವರ ನಂಬಿಕೆಯೇನೂ ಹುಸಿಹೋಗಲಿಲ್ಲ. ಅಂದುಕೊಂಡಿದ್ದಕ್ಕಿಂತ ಮಜವೂ, ತಾಜಾವೂ ಆದ ಕಥೆಯನ್ನು ನಾಗಶೇಖರ್ ಕಟ್ಟಿದ್ದರು.

ಒಟ್ಟು ತೊಂಬತ್ತು ದಿನಗಳ ಕಾಲ ಚಿತ್ರೀಕರಣಮಾಡಿರುವ ಚಿತ್ರತಂಡ ಇದೀಗ ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳಲ್ಲಿ ಮಗ್ನವಾಗಿದೆ.

ಈ ಚಿತ್ರ ಘೋಷಣೆಯಾದ ಹೊಸತರಲ್ಲಿ, ರಾಧಿಕಾ ಕುಮಾರಸ್ವಾಮಿ ನಾಯಕಿಯಾಗಿ ನಟಿಸಲಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿದ್ದವು. ಆದರೆ ಚಿತ್ರೀಕರಣದ ಹಂತದಲ್ಲಿ ಭಾವನಾ ನಾಯಕಿಯಾಗಿ ನಟಿಸುತ್ತಿದ್ದಾರೆ ಎಂಬ ವಿಷಯ ಜಾಹೀರುಗೊಂಡಿತ್ತು.

ನಾಗಶೇಖರ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿರುವ ಈ ಚಿತ್ರದಲ್ಲಿ ಚಂದನ್ ಗೌಡ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ನಟ, ನಿರ್ದೇಶಕ ರಿಷಭ್ ಶೆಟ್ಟಿ ಕೂಡ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದತ್ತಣ್ಣ, ಸಾಧುಕೋಕಿಲ, ಚಿಕ್ಕಣ್ಣ ಅವರ ಗ್ಯಾಂಗ್ ನಗೆಸುಪಾರಿ ಪಡೆದುಕೊಂಡಿದ್ದಾರೆ. ಅರ್ಜುನ್ ಜನ್ಯ ಸಂಗೀತ, ಸತ್ಯ ಹೆಗಡೆ ಛಾಯಾಗ್ರಹಣ ಚಿತ್ರಕ್ಕಿದೆ. ■



## ಒಟಿಟಿ ದಾರಿಯಲ್ಲಿ ಪುನೀತ್!

ಎರಡು ಮೂರು ವರ್ಷಕ್ಕೊಂದು ಸಿನಿಮಾ ಮಾಡುತ್ತಿದ್ದ ಪುನೀತ್ ಈಗ ತಾವು ನಟಿಸುತ್ತಿರುವ ಸಿನಿಮಾಗಳ ಸಂಖ್ಯೆ ಹೆಚ್ಚಿಸಿಕೊಂಡಿರುವುದು ಗೊತ್ತೇ ಇದೆ. ಅಷ್ಟೇ ಅಲ್ಲ, ಅವರು 'ಪಿಆರ್‌ಕೆ ಪ್ರೊಡಕ್ಷನ್ಸ್' ಮೂಲಕ ಮಧ್ಯಮ ಬಜೆಟ್ ಸಿನಿಮಾಗಳನ್ನು ನಿರ್ಮಾಣ ಮಾಡುವ ಮೂಲಕ ಹೊಸ ಮತ್ತು ಪ್ರತಿಭಾವಂತ ನಿರ್ದೇಶಕರ ಬೆಂಬಲಕ್ಕೂ ನಿಂತಿದ್ದಾರೆ. ಕಳೆದ ವರ್ಷ ಅವರ ನಿರ್ಮಾಣಸಂಸ್ಥೆಯ ಅಡಿಯಲ್ಲಿ ನಿರ್ಮಾಣವಾಗಿದ್ದ 'ಫ್ರೆಂಚ್ ಬಿರಿಯಾನಿ', ಒಟಿಟಿಯಲ್ಲಿ ಸಾಕಷ್ಟು ಸದ್ದು ಮಾಡಿತ್ತು. ಈಗ ಪುನೀತ್ ತಮ್ಮ ನಿರ್ಮಾಣದ ಸಿನಿಮಾಗಳಿಗೆ ಒಟಿಟಿಯನ್ನೇ ವೇದಿಕೆ ಮಾಡಿಕೊಳ್ಳಲು ನಿರ್ಧರಿಸಿರುವಂತಿದೆ. ಈಗಷ್ಟೇ ಚಿತ್ರಮಂದಿರಗಳು ತೆರೆದಿದ್ದರೂ ಜನರು ಅತ್ತ ಮುಖಮಾಡುತ್ತಿಲ್ಲ ಎನ್ನುವುದು ಒಂದು ಆತಂಕವಾದರೆ, ದಿನದಿಂದ ದಿನಕ್ಕೆ ಕುಸಿಯುತ್ತಲೇ ಇರುವ ಚಿತ್ರರಂಗದ ಆರ್ಥಿಕ ಪರಿಸ್ಥಿತಿ ಭವಿಷ್ಯದ ಬಗ್ಗೆ ಭೀತಿ ಹುಟ್ಟಿಸುವಂತಿವೆ.

ಇಂಥ ಸಂದರ್ಭದಲ್ಲಿ ಒಟಿಟಿ ಪ್ರಯೋಗಶೀಲರಿಗೆ ವರದಾನವಾಗುತ್ತದೆ ಎಂಬ ನಿರೀಕ್ಷೆಯೂ ಈಗ ಹುಸಿಯಾಗಿದೆ. ಎಲ್ಲ ಒಟಿಟಿ ವೇದಿಕೆಗಳೂ ಕನ್ನಡ ಸಿನಿಮಾಗಳನ್ನು ಕೊಳ್ಳಲು ಹಿಂದುಮುಂದು ನೋಡುತ್ತಿವೆ. ಒಂದು ಸ್ಟಾರ್ ಸಿನಿಮಾ ತೆಗೆದುಕೊಂಡು, ಈ ವರ್ಷದ ಬಜೆಟ್ ಮುಗಿದಿದೆ ಎಂದು ಕೈತೊಳೆದುಕೊಳ್ಳುತ್ತಿದ್ದಾರೆ. ಈ ಹೊತ್ತಿನಲ್ಲಿ ಪುನೀತ್ ಮುಂದೆ ನಿಂತು ತಮ್ಮ ನಿರ್ಮಾಣ ಸಂಸ್ಥೆಯಲ್ಲಿ ತಯಾರಾದ ಸಿನಿಮಾಗಳನ್ನು ಒಟಿಟಿ ವೇದಿಕೆಯಲ್ಲಿ ಬಿಡುಗಡೆ ಮಾಡಲು ಯತ್ನಿಸುತ್ತಿರುವುದು ಸ್ವಾಗತಾರ್ಹ. ಸತ್ಯಪ್ರಕಾಶ್ ನಿರ್ದೇಶನದ 'ಮ್ಯಾನ್ ಆಫ್ ದಿ ಮ್ಯಾಚ್', ಅರ್ಜುನ್ ಕುಮಾರ್ ನಿರ್ದೇಶನದ 'ಫ್ಯಾಮಿಲಿ ಪ್ಯಾಕ್' ಸಿನಿಮಾಗಳೂ ಚಿತ್ರೀಕರಣ ಮುಗಿಸಿದ್ದು, ಒಟಿಟಿಯಲ್ಲಿಯೇ ಬಿಡುಗಡೆ ಮಾಡುವ ತಯಾರಿ ನಡೆಯುತ್ತಿದೆ ಎಂಬ ಸುದ್ದಿ ಇದೆ. 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾಗೆ ಪುನೀತ್ ಒಂದು ಹಾಡನ್ನೂ ಹಾಡಿದ್ದಾರೆ. ಆ ಸಿನಿಮಾಗಳು ಒಟಿಟಿಯಲ್ಲಿ ಮಾರುಕಟ್ಟೆ ಗಿಟ್ಟಿಸಿಕೊಂಡರೆ ಖಂಡಿತ ಇನ್ನಷ್ಟು ಕನ್ನಡ ಚಿತ್ರಗಳಿಗೆ ದಾರಿಯಾಗುತ್ತವೆ.

ಚಿತ್ರ: ಚಂದನ್ ಗೌಡ